
ಬುಧೇಶ್ವರ ಮಠದ ಕಲ್ಯಾಣಿಗೆ ಹೊಸರೂಪ ನೀಡಲು ಶ್ರಮದಾನ


ಚಗಚಗೆರೆ ಕಲ್ಯಾಣಿಗೆ ಹೊಸ ಉಸಿರು

ಮೂಡಿದೆ. 'ಬಹುಶಃ ಮುಂದಿನ ದಿನಗಳಲ್ಲಿ ಕೇರಳ ರಾಜ್ಯದಲ್ಲಿ ಸರ್ಕಾರದ ವತಿಯಿಂದ ಈ ಬಗೆಯ ಕಟ್ಟಗಳ ನಿರ್ಮಾಣಕ್ಕೆ ಹೆಚ್ಚಿನ ಒಲವು ಮೂಡುವ ಸಾಧ್ಯತೆ ಇದೆ' ಎನ್ನುತ್ತಾರೆ ಶ್ರೀಪಡ್ರೆಯವರು.

ಕೆರೆ ಪುನಶ್ಚೇತನ ತಜ್ಞರೆಂದೇ ಖ್ಯಾತರಾದ ಶಿರಸಿಯ ಶಿವಾನಂದ ಕಳವೆಯವರು ಮಳೆನೀರಿನ ಸಂರಕ್ಷಣೆಯ ಕುರಿತು ರಾಜ್ಯಾದ್ಯಂತ ಓಡಾಡಿ ಸಾಕಷ್ಟು ಮಾಹಿತಿಯನ್ನು ಸಂಗ್ರಹಿಸಿ, ದಾಖಲಿಸಿದ್ದಾರೆ. ಕಳೆದ ಏಳೆಂಟು ವರ್ಷಗಳಿಂದ ಜನಸಮುದಾಯ ಹಾಗೂ ಸ್ವಾಮೀಜಿಗಳು, ರಾಜಕಾರಣಿಗಳು, ಚಲನಚಿತ್ರ ನಟರು, ಉದ್ಯಮಿಗಳಿಗೆ ಪ್ರೇರಣೆ ನೀಡಿದ್ದಾರೆ. ಜನರನ್ನು ಸಂಘಟಿಸಿ, ಧನಸಂಗ್ರಹವನ್ನೂ ಮಾಡಿ, ಜಲಸಂರಕ್ಷಣೆಯ ಕಾರ್ಯಗಳು ರಾಜ್ಯಾದ್ಯಂತ ವ್ಯಾಪಕವಾಗಿ ನಡೆಯಲು ಮುತುವರ್ಜಿ ವಹಿಸಿದ್ದಾರೆ. ಬರದ ನಾಡಾಗಿದ್ದ ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕದ ಭಾಗದಲ್ಲಿ 20ರಿಂದ 60 ಎಕರೆಗಳಷ್ಟು ಬೃಹತ್ ವಿಸ್ತೀರ್ಣದ ಕೆರೆಗಳು ಪುನಶ್ಚೇತನಗೊಳ್ಳಲು ಪ್ರಮುಖ ಪಾತ್ರ ವಹಿಸಿದ್ದಾರೆ. ತಮ್ಮದೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಜನರಿಗೆ ಪ್ರೇರಣೆ ನೀಡಿ, ಸಂಘಟಿಸಿ, ಇದುವರೆಗೆ 36 ಕೆರೆಗಳ ಪುನಶ್ಚೇತನದ ಹಿಂದೆ ಸಾಮುದಾಯಿಕವಾಗಿ ಸದ್ದಿಲ್ಲದೇ ದುಡಿದಿರುವುದು ಇವರ ಹೆಗ್ಗಳಿಕೆ! ಈಗ ಉತ್ತರ ಕನ್ನಡ ಜಿಲ್ಲೆಯಲ್ಲಿ ಅಂತರ್ಜಲ ಪ್ರಮಾಣ ಹೆಚ್ಚಾಗಿದೆ. ತಮ್ಮ ಜಿಲ್ಲೆಯ ಕೆರೆ ಪುನಶ್ಚೇತನ ಹೊರತುಪಡಿಸಿಯೂ ರಾಜ್ಯದ ಹಲವು ಭಾಗಗಳಲ್ಲಿ ತಮ್ಮ ಪ್ರೇರಣೆ ಅಥವಾ ನೇತೃತ್ವದಲ್ಲಿ ಇದುವರೆಗೆ 80ಕ್ಕೂ ಹೆಚ್ಚು ದೊಡ್ಡಮಟ್ಟದ ಕೆರೆಗಳು